(ನೋಡಿ 'ಯುಗಯಾತ್ರಿ ಭಾರತೀಯ ಸಂಸ್ಕೃತಿ' ಭಾಗ–2) ಇವುಗಳ ಜತೆಗೆ ಅವೈದಿಕ ಎನ್ನಬಹುದಾದ ಆಗಮಗಳು ಅದರಲ್ಲೂ ಪಾಂಚರಾತ್ರ, ಶೈವ, ವೈಷ್ಣವ , ಕಾಪಾಲಿಕ ಮುಂತಾದ ಶಾಖೆಗಳು ಇದ್ದವು. ಇವುಗಳ ನಡುವೆ ನಡೆದ ಪ್ರಮುಖ ವಾಗ್ವಾದಗಳು ಇಲ್ಲಿ ಬರುವುದಿಲ್ಲ. ಮಕ್ಕಲಿಗೊಸಾಲಿ ಜೈನರೊಂದಿಗೆ ನಡೆಸಿದ ಬ್ರಹ್ಮಚರ್ಯದ ಕುರಿತಾಗಿ ನಡೆಸಿದ ಸಂವಾದವನ್ನು ಏತಕ್ಕಾಗಿ ನಡೆಸಿದ? ಮುಂದೆ ಅವನ ಆಜೀವಕ ಪಂಥ ಜನಪದ ಧರ್ಮವಾಗಿ ಬೆಳೆದ ಬಗೆಗಳು ಇಲ್ಲಿ ಉಲ್ಲೇಖಗೊಂಡಿಲ್ಲ. ನಿಯತಿ ಮತ್ತು ಶೂನ್ಯವನ್ನು ಕನ್ನಡದಲ್ಲಿ ವಚನಕಾರರೊಂದಿಗೆ ಜೋಡಿಸಿ ಚರ್ಚೆ ನಡೆಸಿರುವ ಸಿ. ಮಹದೇವಪ್ಪ (ಆಜೀವ ಮಧುಸ್ಮೃತಿ) ಮತ್ತು ಈಚೆಗೆ ಜನಪದರ ಧರ್ಮವಾಗಿ ಹೇಗೆ ಒಂದು ಭಾಗದಲ್ಲಿ ಬೆಳೆಯಿತು ಎಂಬುದನ್ನು ಲಕ್ಷ್ಮೀಪತಿ ಕೋಲಾರ ಅವರ 'ದಕ್ಷಿಣದಂಡಾಜೀವಿಕ' ಕೃತಿಗಳನ್ನು ನೋಡಬಹುದು.

ಸಂವಾದಗಳ ಈ ಕೃತಿಯಲ್ಲಿ ಭಾರತೀಯ ತತ್ತ್ವಜ್ಞಾನವನ್ನು ಮತ್ತು ಅದರ ಲೋಕದೃಷ್ಟಿಯನ್ನು ಜಡಗೊಳ್ಳದಂತೆ ಆಧುನಿಕವಾಗಿ ಮಾತನಾಡುವುದು ಡಿ.ಆರ್. ನಾಗರಾಜ ಮತ್ತು ರಾಜನ್. ಉಳಿದಂತೆ ಕೊಂಚ ಹಿಂಜರಿದರೂ ಸಮಾಜಶಾಸ್ತ್ರೀಯ ನೆಲೆಯಲ್ಲಿ ನೋಟಕ್ರಮಗಳನ್ನು ಬದಲಿಸಿಕೊಳ್ಳುವ ಶ್ರೀಪತಿ ತಂತ್ರಿಯವರ ಮಾತುಗಳು ಇಲ್ಲಿವೆ. ಡಿ.ಆರ್. ಭಾರತೀಯ ಸಂಸ್ಕೃತಿಯನ್ನು ವೈದಿಕ ಮತ್ತು ಶ್ರಮಣ ಎಂದು ವಿಂಗಡಿಸುತ್ತಾರೆ. ಆದರೆ, ಇವರೂ ಕೂಡ ಜನಪದ ಕಾವ್ಯ ಕಥನಗಳನ್ನು ಹಾಗೂ ಅವುಗಳ ಒಳಗೆ ಇರುವ ತೀವ್ರವಾದ ವಿದ್ರೋಹಿ ಗುಣಗಳನ್ನು ಹೆಚ್ಚು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ. ಡಿ.ಆರ್. ಭಾರತೀಯ ತತ್ತ್ವಪರಂಪರೆಯನ್ನು ಮೂರು ಬಗೆಯಲ್ಲಿ ಕಾಣುತ್ತಾರೆ. ಪರಮ ವಿದ್ರೋಹಿ, ಪರಮ ಸಾಮರಸ್ಯ ಮತ್ತು ಪರಮ ಶತ್ರುತ್ವ ಎಂದು. ಇದು ಸರಿಯಾದ ಕ್ರಮವಾದರೂ ಇದನ್ನು ಕೇವಲ ಸ್ಥಾಪಿತ ವೈದಿಕ ತತ್ತ್ವಗಳ ಮತ್ತು ಜೈನ, ಬುದ್ಧತತ್ತ್ವಗಳ ಹಿನ್ನಲೆಯಲ್ಲಿ ನೋಡದೇ ನಾಥ, ಸಿದ್ಧ, ಮತ್ತು ಭಕ್ತಿ ಚಳವಳಿಗಳು, ತತ್ತ್ವಪದಗಳ ಜೊತೆಗೆ ನೋಡಿದರೆ ಮತ್ತಷ್ಟು ದೃಷ್ಟಿಕೋನಗಳು ಎದುರಾಗುತ್ತವೆ. ಆದರೆ, ಡಿ.ಆರ್. ಅವರ ದಾರಿಗೆ ಬಂದು ಸಂವಾದವನ್ನು ಬೆಳೆಸುವ ವಿದ್ವಾಂಸರು ಇಲ್ಲಿ ಕಡಿಮೆ. ತಂತ್ರಿಯವರು ಕೊಂಚ ಮುಕ್ತವಾಗಿದ್ದರೂ ಸಂಪೂರ್ಣವಾಗಿ ಬೆಳೆಸುವುದಿಲ್ಲ. ಕಬ್ಬಿಣದ ಯುಗವನ್ನು ಎತ್ತಿ ಹೊಸ ನೋಟಕ್ರಮದಿಂದ ನುಗ್ಗಿದರೂ ಕೊಂಡಿ ತಪ್ಪುತ್ತದೆ. ವಸಾಹತು ನಂತರದ ನೋಟ, ಇತಿಹಾಸಕ್ರಮ, ಮಾನವಶಾಸ್ತ್ರ, ಜನಪದನೋಟಗಳಿಂದ ಹೊಸದಾಗಿ ಇಂದು ಈ ವಾಗ್ವಾದವನ್ನು ಬೆಳೆಸಬೇಕಾಗಿದೆ. ಈ ಸಂವಾದಕ್ಕೆ ಪ್ರತಿಕ್ರಿಯೆ ಕೊಟ್ಟಿರುವ ಸಂಶೋಧಕ ಮನು ದೇವದೇವನ್ ಈ ದೃಷ್ಟಿಕೋನಗಳಿಂದಲೇ ಕೆಲ ಪ್ರಶ್ನೆಗಳನ್ನು ಎತ್ತುತ್ತಾರೆ. ಇವರ ಸೂಕ್ಷ್ಮತೆ ಇರುವುದೇ ವೈದಿಕವನ್ನು ನಾವು ಇದುವರೆಗೆ ಕೆಲವು ಶಿಸ್ತುಗಳ ಮುಖೇನ ಮಾತ್ರವೇ ನಡೆಸಿದ್ದೇವೆ ಎಂಬುದು. ಮುಂದುವರೆದು ಹೇಳುವುದಾದರೆ ಅವೈದಿಕವನ್ನು ನಾವು ಇಂದಿಗೂ 'ಜನಪದ ವಾಸ್ತುಶಿಲ್ಪ'ದ ಶಾಖೆಯಿಂದ ನೋಡಿಯೇ ಇಲ್ಲ. ವೈದಿಕ ನೋಟಗಳಿಗಿಂತ ಜನಪದ ಪುರಾಣಗಳೆ ಮತ್ತೊಂದು ದೃಷ್ಟಿಯಲ್ಲಿ ಜನರ ತತ್ತ್ವಶಾಸ್ತ್ರವನ್ನು ರೂಪಿಸಿವೆ. ಏನೇ ಆದರೂ ಈ ಬಗೆಯ ಪುಸ್ತಕಗಳು ನಮಗೆ ಅಪ್ರಸ್ತುತವೇನಲ್ಲ. ಬದಲಿಗೆ ಇದರಲ್ಲಿನ ಅನೇಕ ಕೊರತೆಗಳನ್ನು ನೀಗಿಸುವ ನಿಟ್ಟಿನಲ್ಲಿ ಆಸಕ್ತರು ವೈದಿಕ ಅವೈದಿಕ ಕುರಿತು ಮತ್ತೊಮ್ಮೆ ಸಂವಾದ ನಡೆಸಬಹುದು.